**ಇಂದು ದಿನಾಂಕ 10.02.2026 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**1.** ನಾನು ಐ.ಟಿ.ಐ. ಓದಿದ್ದೇನೆ. ಪ್ರಮಾಣ ಪತ್ರದ ವಿಚಾರಗಳು ಸ್ವಲ್ಪ ಗೊತ್ತು. ರಾಜುರವರು ನನಗೆ ಸ್ನೇಹಿತರು. ವಾದಿ ನಮ್ಮ ಊರಿನವರು. ಉಳಿದ ಪ್ರತಿವಾದಿಗಳು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿದ್ದರು. ನಾನು ವ್ಯವಹಾರದಲ್ಲಿ ಮಧ್ಯಸ್ಥಿಕೆ ವಯಸಿದ್ದೆನು. ಕುಮಾರ್ ಎನ್ನುವವರು ಸಹ ಮಧ್ಯಸ್ಥಿಕೆ ವಯಸಿದ್ದರು. ರೂ.9 ಲಕ್ಷವನ್ನು 4 ನೇ ಪ್ರತಿವಾದಿಗೆ ಕೊಟ್ಟರು. ರೂ.3 ಲಕ್ಷ ಹಣವನ್ನು ನಗದಾಗಿ ಕೊಟ್ಟಿದ್ದಾರೆ. ರೂ.3 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್. ಮಾಡಿದ್ದಾರೆ ಮತ್ತು ಡಿ.ಡಿ. ನ್ನು ಕೊಟ್ಟಿದ್ದಾರೆ. ರೂ.3 ಲಕ್ಷದ ಹಣವನ್ನು 500 ಮುಖಬೆಲೆಯ ನೋಟುಗಳನ್ನು ಕೊಟ್ಟರು. ಕುಮಾರ್ ಎನ್ನುವವರು ಮತ್ತೊಬ್ಬ ಸಾಕ್ಷಿದಾರರು. ರಾಜುರವರು ನನಗೆ ಸ್ನೇಹಿತರಾದ ಕಾರಣ ವಾದಿಗಳ ಹತ್ತಿರ ಬಡ್ಡಿಗೆ ಹಣವನ್ನು ಕೊಡಿಸು ಎಂದು ಕೇಳಿದರು ಆಗ ನಾನು ಕರೆದುಕೊಂಡು ಹೋಗಿ ಕರಾರು ಪತ್ರವನ್ನು ವಾದಿಗೆ ಮಾಡಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ರೆಡ್ಡಿರವರ ಹೆಸರಿನಲ್ಲಿ ಇದೆ. ದಾವಾ ಆಸ್ತಿ ರೆಡ್ಡಿರವರಿಗೆ ಹೇಗೆ ಬಂತು ಎಂದು ಗೊತ್ತಿಲ್ಲ. ನಾವು ಒಂದೇ ಊರಿನವರಾದ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**